## 2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆ: 88/2022

ಪಿ.ಡಬ್ಲುಃ 6 ಸಿಡಬ್ಲುಃ 3/5

| | | |
|---|---|---|
| ಸಾಕ್ಷಿಯ ಹೆಸರು | : | ಮಹಮ್ಮದ್ ಅಜೀಮ್ |
| ತಂದೆ ಹೆಸರು | : | ಗೌಸ್ ಸಾಬ್ |
| ವಯಸ್ಸು | : | 42 ವರ್ಷ |
| ವೃತ್ತಿ | : | ಟೈಲರ್ ಕೆಲಸ |
| ವಾಸಸ್ಥಳ | : | ಮಿಲ್ಲರಪೇಟೆ, ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 22-09-2022

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಪರಿಚಯ , ಅವರು ನಮ್ಮ ಮನೆಯ ಹತ್ತಿರ ವಾಸವಾಗಿರುತ್ತಾರೆ. ಚಾಸಾ-1 ರವರ ಮನೆ ನಮ್ಮ ಮನೆಯ ಹತ್ತಿರ ಇರುತ್ತದೆ. ಸಾಕ್ಷಿಗೆ ದಿಃ 02-12-2021 ರ ಮತ್ತು 03-12-2021 ರ ಪೊಲೀಸ್ ನೋಟಿಸ್ ಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-10 ಮತ್ತು 11 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-10(ಎ) ಮತ್ತು 11(ಎ) ಎಂದು ಗುರುತಿಸಲಾಯಿತು . ಸದರಿ ಸಹಿಗಳನ್ನು ಮಿಲ್ಲರಪೇಟೆಯಲ್ಲಿ ಇರುವಾಗ ಬ್ರೂಸ್ ಪೇಟೆಯ ಪೊಲೀಸರು ತೆಗೆದುಕೊಂಡಿರುತ್ತಾರೆ. ದಿಃ 02-12-2021 ರಂದು ಪೊಲೀಸರು ಚಾಸಾ-1 ರವರ ಮನೆಯ ಮುಂದೆ ಗಲಾಟೆಯಾದ ಬಗ್ಗೆ ವಿಚಾರಣೆ ಮಾಡಲು ಬಂದಿದ್ದರು . ಆಗ ನಾನು ಮನೆಯಿಂದ ಹೊರಗಡೆ ಬಂದಾಗ ಪೊಲೀಸರು ಆ ನೋಟಿಸ್ ನ್ನು ಕೊಟ್ಟಿರುತ್ತಾರೆ. ಸದರಿ ದಿನ ಪೊಲೀಸರು ಸ್ಥಳದಲ್ಲಿ ಬಂದು ವಿಚಾರಣೆ ಮಾಡಿದಾಗ ನಾನು ಘಟನೆಯನ್ನು ನೋಡಿರುವುದಿಲ್ಲ ಎಂದು ಹೇಳಿರುತ್ತೇನೆ. ಅಲ್ಲೆ ಸ್ಥಳದಲ್ಲಿ ಇದ್ದ 3 ದ್ವಿಚಕ್ರ ವಾಹನಗಳನ್ನು ಜಖಂ ಗೊಂಡಿದ್ದು ಮತ್ತು ಸ್ಥಳದಲ್ಲಿ ಬಿದ್ದಿದ್ದ ವಸ್ತು ಗಳನ್ನು ಪಂಚನಾಮೆ ಮಾಡಿ ಪ್ರತ್ಯೇಕವಾಗಿ ಸೀಲ್ ಮಾಡಿ ನನ್ನ ಸಹಿಯನ್ನು ಪಡೆದಿರುತ್ತಾರೆ.

ಸ್ಥಳದಲ್ಲಿ ಬಿದ್ದ ರಕ್ತವನ್ನು ಪೊಲೀಸರು ಹತ್ತಿಯಿಂದ ಶೇಖರಣೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಲ್ಯಾಪ್‌ಟ್ಯಾಪ್‌ನಲ್ಲಿ ಸಹಿ ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ನಿಪಿ-4 ನ್ನು ತೋರಿಸಲಾಗಿ ಅದರಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ನಿಪಿ-4(ಬಿ), 4(ಸಿ) ಮತ್ತು 4(ಡಿ) ಎಂದು ಗುರುತಿಸಲಾಯಿತು. ನನ್ನ ಜೊತೆ ಚಾಸಾ-2 ರವರು ಸಹ ಸಹಿ ಮಾಡಿರುತ್ತಾರೆ. ಸಾಕ್ಷಿ ಗೆ ಪೋಟೋವನ್ನು ತೋರಿಸಲಾಗಿ ಅದರಲ್ಲಿ ತಾನು ಇರುವುದಾಗಿ ಒಪ್ಪಿಕೊಂಡಿರುತ್ತಾನೆ. (ತನಿಖಾಧಿಕಾರಿಯೂ ಸದರಿ ಪೋಟೋವಿನ ಸಿ ಡಿ ಯನ್ನು ಹಾಜರುಪಡಿಸದೆ ಇರುವುದರಿಂದ ಅದನ್ನು ನಿಶಾನೆ ಎಂದು ಗುರುತಿಸಿರುವುದಿಲ್ಲ). ಜಖಂಗೊಂಡ 3 ವಾಹನಗಳನ್ನು ಅವುಗಳ ಮಾಲೀಕರಿಗೆ ನ್ಯಾಯಾಲಯದ ಆದೇಶದಿಂದ ಬಿಡುಗಡೆಗೊಳಿಸಿದ್ದು, ಸದರಿ ವಾಹನಗಳ ಪೊಟೋಗಳನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು , ಸದರಿ ಪೋಟೋಗಳನ್ನು ನಿಪಿ-12 ರಿಂದ 14 ಎಂದು ಗುರುತಿಸಲಾಯಿತು.

ಸದರಿ ಸ್ಥಳದಲ್ಲಿ ಪಂಚನಾಮೆ ಕಾಲಕ್ಕೆ ಪೊಲೀಸರು ಎರಡು ಮಚ್ಚುಗತ್ತಿಯನ್ನು , ಬ್ಯಾಟ್ , ಒಂದು ಸ್ಟಿಕ್ ಇದ್ದು ಅದಕ್ಕೆ ಅದರ ಮೇಲೆ ರಿಂಗ್ ಇರುತ್ತದೆ ಅವುಗಳನ್ನು ಜಪ್ತುಗೊಳಿಸಿದ್ದರು . ಸದರಿ ವಸ್ತು ಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ಮು.ಮಾ-1,2,4 ರಿಂದ 6 ಗಳನ್ನು ನೋಡಿ ಗುರುಸಿರುತ್ತಾರೆ.

( ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಇರುವ ಬಿಳಿ ಬಟ್ಟೆಯಲ್ಲಿ ಹೊಲೆದು ಸೀಲ್ ಮಾಡಲಾಗಿರುವ ವಸ್ತುಗಳನ್ನು ತೆರೆಯಲು ಪ್ರಜ್ಞ ಸಾರ್ವಜನಿಕ ಅಭಿಯೋಜಕರು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು ).

ಸಾಕ್ಷಿಗೆ ಹತ್ತಿಯಲ್ಲಿ ಸಂಗ್ರಹಿಸಿದ ರಕ್ತದ ಮಾದರಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಮು.ಮಾ-12 ಎಂದು ಗುರುತಿಸಲಾಯಿತು . ಸಾಕ್ಷಿಗೆ ಪಂಚನಾಮೆ ಕಾಲಕ್ಕೆ ಸಂಗ್ರಹಿಸಿದ ದೂಳನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ-13 ಎಂದು ಗುರುತಿಸಲಾಯಿತು. ಸಾಕ್ಷಿಯೂ ನಿಪಿ-5 ನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು . ನಿಪಿ-5 ನ್ನು ಚಾಸಾ-1 ರವರ ಮನೆಯ ಮುಂದೆ ತೆಗೆಯಲಾಗಿರುತ್ತದೆ .

ಮಾರನೆಯ ದಿನ ನಾನು ಬಜಾರ ನಲ್ಲಿ ಇರುವಾಗ ಪೊಲೀಸರು ನನಗೆ ಪೋನ್ ಮಾಡಿ ಬರುವಂತೆ ಹೇಳಿದಾಗ ನಾನು ಮತ್ತು ಶರ್ಮಾಸ್ ನು ಅವರ ವಾಹನದಲ್ಲಿ ಹವಂಬಾವಿಯ ಹತ್ತಿರ ಕರೆದುಕೊಂಡು ಹೋದರು . ಪೊಲೀಸರ ಜೊತೆ ಅವರ ವಾಹನದಲ್ಲಿ 1 ನೇ ಆರೋಪಿಯೂ ಸಹ ಇದ್ದನು . ನಾವು ಪೊ. ಠಾಣೆಯಿಂದ ಸಿರುಗುಪ್ಪಾ ರಸ್ತೆಯ ಹವಂಬಾವಿ ಹತ್ತಿರ ಹೋದೆವು . ಅಲ್ಲಿ ಪೊಲೀಸರು ಹೇಳಿದರು ಅದರಂತೆ 1 ನೇ ಆರೋಪಿಯೂ ಮುಳ್ಳಿನ ಪೊದೆಯಿಂದ ಮಚ್ಚನ್ನು ತೆಗೆದನು . ಪೊಲೀಸರು ಮಕ್ ಬುಲ್ ನು ಮಚ್ಚನ್ನು ಎಲ್ಲಿ ಬಿಸಾಕಿದಿಯಾ ಎಂದು ಕೇಳಿದಾಗ ಆತನು ಮುಳ್ಳಿನ ಪೋದೆಯಲ್ಲಿ ಎಂದು ಹೇಳಿದನು. ಪೊಲೀಸರು ಸದರಿ ಮಚ್ಚನ್ನು ಆರೋಪಿ ತೆಗೆದುಕೊಟ್ಟಾಗ ಸ್ಥಳದಲ್ಲಿ ಪಂಚನಾಮೆ ಮಾಡಿದರು ಮತ್ತು ಒಂದು ಪೋಟೋವನ್ನು ತೆಗೆದಿರುತ್ತಾರೆ . ಸಾಕ್ಷಿಯೂ ಸದರಿ ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-15 ಎಂದು , ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು . ಸಾಕ್ಷಿಯೂ ಮು.ಮಾ-3 ರನ್ನು ನೋಡಿ ಗುರುತಿಸಿರುತ್ತಾರೆ . ಪಂಚನಾಮೆ ಕಾಲಕ್ಕೆ ತೆಗೆದ ಪೋಟೋವನ್ನು ಸಾಕ್ಷಿಯೂ ನೋಡಿ ಗುರುತಿಸಿದ್ದು (ತನಿಖಾಧಿಕಾರಿಯವರು ಸಿ ಡಿ ಯನ್ನು ಹಾಜರುಪಡಿಸಿದೆ ಇರುವುದರಿಂದ ಸದರಿ ಪೋಟೋವನ್ನು ನಿಶಾನೆ ಎಂದು ಗುರುತಿಸಿರುವುದಿಲ್ಲ ). ನಿಪಿ-15 ರ ಕಾಲಕ್ಕೆ ಪೊಲೀಸರು ತೆಗೆದ ನಕಾಶೆಯನ್ನು ಸಾಕ್ಷಿಯೂ ನೋಡಿ ಗುರುತಿಸಿದ್ದು ಅದನ್ನು ನಿಪಿ-16 ಎಂದು,

ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ 1 ನೇ ಆರೋಪಿ ಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ಬಿ ವಿ ಬಿ ವಕೀಲರಿಂದಃ

ಚಾಸಾ-14 ಮತ್ತು 15 ರವರು ನನ್ನ ತಮ್ಮ ಮತ್ತು ತಂಗಿ ಎಂದರೆ ಸರಿ. ಅವರು ಸಹ ಟೈಲರಿಂಗ್ ಕೆಲಸ ಮಾಡುತ್ತಾರೆ ಎಂದರೆ ಸರಿ. ಚಾಸಾ-1 ಮತ್ತು 13 ರವರು ನನ್ನ ಜೊತೆಗೆ ಈ ದಿನ ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ-1 ಮತ್ತು 13 ರವರು ಟೈಲರಿಂಗ್ ಕೆಲಸ ಮಾಡುತ್ತಾರೆ ಎಂದರೆ ಸರಿ. ಸದರಿ ಅವರು ಜೀನ್ಸ್ ಪ್ಯಾಂಟ್ ಗಳನ್ನು ರೆಡಿಮಾಡುವ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ಸದರಿ ಚಾಸಾ-1 ಮತ್ತು 13 ರವರ ಜೊತೆ ಟೈಲರಿಂಗ್ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಇಂದಿನವರೆಗೂ ಸಹ 1 ಮತ್ತು 13 ರವರ ಘಟಕದಲ್ಲಿ ಟೈಲರಿಂಗ್ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ನಮ್ಮ ಜೀವನ ಟೈಲರಿಂಗ್ ಉದ್ಯೋಗದಿಂದ ಎಂದರೆ ಸರಿ. ನಾನು, ಚಾಸಾ-14 ಮತ್ತು 15 ರವರು ಚಾಸಾ-1 ಮತ್ತು 13 ರವರ ಮೇಲೆ ಅವಲಂಬಿತಾಗಿರುತ್ತೇವೆ ಆ ಕಾರಣದಿಂದ ಅವರಿಗೆ ಸಹಾಯ ಮಾಡಲು ಈ ಪ್ರಕರಣದಲ್ಲಿ ಸಾಕ್ಷಿಯಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 02-12-2021 ರಂದು ಪೊಲೀಸರು ಕರಿಸಿದ ಚಾಸಾ-1 ರವರ ಮನೆಯ ಹತ್ತಿರ ಹೋಗಿ ಪೊಲೀಸರು ಪಂಚನಾಮೆ ಮಾಡಿದಾಗ ಮು.ಮಾ-1 ,2, 4 ರಿಂದ 6 ನ್ನು ಜಪ್ತಿಗೊಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-4 ರ ಕಾಲಕ್ಕೆ ತೆಗೆದ ಪೋಟೋಗಳನ್ನು ತೋರಿಸಲಾಗಿ ಅದರಲ್ಲಿ ಮಚ್ಚು ಮತ್ತು ಬ್ಯಾಟುಗಳು ಮತ್ತು ಹಾಕಿಸ್ಟಿಕ್ ಗಳು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯೂ ಅದರಲ್ಲಿ ಮಚ್ಚು, ಬ್ಯಾಟುಗಳು ಕಾಣಿಸುತ್ತವೆ ಎಂದು ಸದರಿ ಪೋಟೋಗಳನ್ನು ನೋಡಿ

ಉತ್ತರಿಸಿರುತ್ತಾರೆ . ಸಾಕ್ಷಿಗೆ ಎರಡು ಪೋಟೋಗಳನ್ನು ಆರೋಪಿ ಪರ ವಕೀಲರು ತೋರಿಸಿದ್ದರಿಂದ ಅವುಗಳನ್ನು ನಿಪಿ-17 ಮತ್ತು 18 ಎಂದು ಗುರುತಿಸಲಾಯಿತು . ನಿಪಿ-18 ನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಮು.ಮಾ-1,2 4 ರಿಂದ 6 ನ್ನು ತೋರಿಸಲಾಗಿ ಸಾಕ್ಷಿಯೂ ಅವು ಕಾಣುತ್ತವೆ ಎಂದು ಉತ್ತರಿಸಿರುತ್ತಾರೆ. ನಿಪಿ-18 ರಲ್ಲಿ ಮು.ಮಾ-1,2 4 ರಿಂದ 6 ನ್ನು ಕಾಣಿಸುವುದಿಲ್ಲ ಎಂದರೆ ಸರಿಯಲ್ಲ . ಮು.ಮಾ-1 ,2,4 ರಿಂದ 6 ರ ಮೇಲೆ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ . ನಿಪಿ-4 ನ್ನು ಪೊ. ಠಾಣೆಯಲ್ಲಿ ಲ್ಯಾಪ್ ಟ್ಯಾಪ್ ನಲ್ಲಿ ಟೈಪ್ ಮಾಡಿದ ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ಮು.ಮಾ-12 ಮತ್ತು 13 ನ್ನು ಸ್ಥಳದಲ್ಲಿ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ . ಪೊಲೀಸರು ಶ್ಯಾಂಪಲ್ ಸೀಲ್ ನ್ನು ನನಗೆ ತೋರಿಸಿಲ್ಲ ಎಂದರೆ ಸರಿ . ಸದರಿ ಸೀಲ್ ನ ಮಾದರಿಯನ್ನು ಸಹ ನನಗೆ ಕೊಟ್ಟಿಲ್ಲ ಎಂದರೆ ಸರಿ . ನಿಪಿ-5 ರ ಪ್ರಕಾರ ಪೊಲೀಸರು ಸ್ಥಳದಲ್ಲಿ ನಕಾಶೆಯನ್ನು ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮು.ಮಾ-12 ರಲ್ಲಿ ಯಾವುದೇ ರಕ್ತ ಇಲ್ಲ ಎಂದರೆ ಸರಿಯಲ್ಲ . ಮು.ಮಾ-12 ರ ಹತ್ತಿಯಲ್ಲಿ ರಕ್ತ ಕಾಣುವುದಿಲ್ಲ ಎಂದರೆ ಸರಿಯಲ್ಲ .

ಮಾರನೆ ದಿನ ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು , ಪೊ. ಠಾಣೆಯಲ್ಲಿ ಚಾಸಾ-4 ರವರು ಇದ್ದು ಅವರೊಂದಿಗೆ ಮಕ್ ಬುಲ್ ನು ಸಹ ಠಾಣೆಯಲ್ಲಿ ಇದ್ದು ಪೊಲೀಸರು ನಮ್ಮ ಎಲ್ಲರನ್ನು ಸಿರುಗುಪ್ಪಾ ರೋಡ್ ಹವಂಬಾವಿ ಹತ್ತಿರ ಕರೆದುಕೊಂಡು ಹೋಗಿದ್ದರು , ಅಲ್ಲಿ ಮಕ್ ಬುಲ್ ಇತನು ಒಂದು ಮಚ್ಚು ಗತ್ತಿಯನ್ನು ಹಾಜರುಪಡಿಸಿದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಹವಂಬಾವಿಯೂ ಬಳ್ಳಾರಿಯ ಒಂದು ಭಾಗವೆಂದರೆ ಸರಿ . ಅಲ್ಲಿ ದಿಪತ ರಸ್ತೆ ಇರುತ್ತದೆ ಎಂದರೆ ಸರಿ . ಅದು ರಾಜ್ಯ ಹೆದ್ದಾರಿ ಎಂದರೆ ಇರಬಹುದು . ಆ ರಸ್ತೆಯಲ್ಲಿ ಸುಮಾರು ಸಾವಿರಾರು ವಾಹನಗಳು ಓಡಾಡುತ್ತವೆ ಎಂದರೆ ಇರಬಹುದು . ಸದರಿ ಸ್ಥಳದಲ್ಲಿ ಸಚಿವ ಶ್ರೀರಾಮುಲು ಮನೆ ಇರುತ್ತದೆ ಎಂದರೆ ಸ್ವಲ್ಪ ಮುಂದೆ ಇರುತ್ತದೆ. ಅಲ್ಲಿ ಎಲಿಪ್ಯಾಡ್ ಇರುತ್ತದೆ ಎಂದರೆ ಸರಿ . ಅಲ್ಲಿ

ಸಾಕಷ್ಟು ಜನ ವಾಹನದಲ್ಲಿ ನಡೆದಾಡುವವರು ಓಡಾಡುತ್ತಾರೆ ಎಂದರೆ ಸರಿ . ನಿಪಿ-16 ರಲ್ಲಿ ತೋರಿಸಿದ ಸ್ಥಳವು ಮುಖ್ಯ ರಸ್ತೆಗೆ ಅಂಟಿಕೊಂಡಿರುತ್ತದೆ ಎಂದರೆ ಸರಿ .

ನಿಪಿ-15 ರಲ್ಲಿ 1 ನೇ ಆರೋಪಿಯೂ ಮಚ್ಚುಗತ್ತಿಯನ್ನು ಮುಳ್ಳಿನ ಪೋದೆಯಿಂದ ತೆಗೆದುಕೊಟ್ಟನು ಎನ್ನುವ ಅಂಶವನ್ನು ಬರೆದಿಲ್ಲ ಎಂದರೆ ಸರಿಯಲ್ಲ . ನಿಪಿ-15 ರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಓದಲು ಬರೆಯಲು ಬರುವುದಿಲ್ಲ . ನಿಪಿ-15 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ಸಾಕ್ಷಿಗೆ ನಿಪಿ-15 ರ ಕಾಲಕ್ಕೆ ತೆಗೆದ ಪೋಟೋವನ್ನು ತೋರಿಸಲಾಗಿ ಅದರಲ್ಲಿ ಮುಳ್ಳಿನ ಪೊದೆ ಕಾಣುವುದಿಲ್ಲ ಎಂದು ಹೇಳಿರುತ್ತಾರೆ . ಸದರಿ ಪೋಟೋವನ್ನು ನಿಪಿ-19 ಎಂದು ಗುರುತಿಸಲಾಯಿತು . ಪೋಟೊಗೊಸ್ಕರ ಪೊಲೀಸರು 1 ನೇ ಆರೋಪಿಯ ಕೈಯಲ್ಲಿ ಮಚ್ಚುಗತ್ತಿಯನ್ನು ಕೊಟ್ಟು ಪೋಟೋ ತೆಗೆಸಿದ್ದಾರೆ ಎಂದರೆ ಸರಿಯಲ್ಲ . ಮು.ಮಾ-3 ರ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿಲ್ಲ ಎಂದರೆ ಸರಿ . ಅದರ ಮೇಲೆ ಇರುವ ಬಿಳಿ ಬಟ್ಟೆ ಚೀಲದಲ್ಲಿ ಸಹಿ ಇರುವ ಚೀಟಿಯನ್ನು ಹಾಕಿರುತ್ತಾರೆ, ಸಾಕ್ಷಿಗೆ ಅದನ್ನು ತೆಗೆದು ತೋರಿಸಲಾಗಿ ಅದರಲ್ಲಿ ಯಾವುದೇ ಚೀಟಿ ಇರುವುದಿಲ್ಲ .

ದಿಃ 03-12-2021 ರಂದು ಮಕ್ ಬುಲ್ ಇತನು ಸಿರುಗುಪ್ಪಾ ರಸ್ತೆಯ ಹವಂಬಾವಿಯ ಹತ್ತಿರ ಮುಳ್ಳಿನ ಪೋದೆಯಲ್ಲಿ ಇರುವ ಮಚ್ಚುಗತ್ತಿಯನ್ನು ಹಾಜರುಪಡಿಸಿರುತ್ತಾನೆ ಎಂದು, ನಿಪಿ-15 ರ ಪ್ರಕಾರ ಪಂಚನಾಮೆ ಮಾಡಿ ನಿಪಿ-16 ರಂತೆ ನಕಾಶೆಯನ್ನು ತಯಾರಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರ ಸರಿಯಲ್ಲ . ಪೊ. ಠಾಣೆಯಲ್ಲಿ ನಿಪಿ-15 ಮತ್ತು 16 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ನಿಪಿ-10 ಮತ್ತು 11 ರಂತೆ ಪೊಲೀಸರು ನನಗೆ ನೋಟಿಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ . ನಿಪಿ-10 ಮತ್ತು 11 ರ ಮೇಲೆ ಪೊಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಪೊ. ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ನಿಪಿ-4, 5, 15 , 16, 12, 13, 14, 19

ನ್ನು ಈ ಪ್ರಕರಣಗೊಸ್ಕರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ . ನಿಪಿ-12, 13 ಮತ್ತು 14 ರ ಮೇಲೆ ಮುರಿದ ಬಗ್ಗೆ ಕುರುಹುಗಳು ಕಾಣುತ್ತಿಲ್ಲ ಎಂದರೆ ಸರಿಯಲ್ಲ . ಚಾಸಾ-1 ಮತ್ತು 13 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.

**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ:**

ಪಿ.ಡಬ್ಲುಃ ಸಿಡಬ್ಲುಃ

ಸಾಕ್ಷಿಯ ಹೆಸರು :

ತಂದೆ ಹೆಸರು :

ವಯಸ್ಸು : ವರ್ಷ

ವೃತ್ತಿ :

ವಾಸಸ್ಥಳ :

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **01-08-2022**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಸ ಅ ರವರು ಪರವಾನಿಗೆ ಕೇಳುತ್ತಾರೆ. ಸ ಅ ರವರ ವಾದವನ್ನು ಕೇಳಿ ಸಾಕ್ಷಿಯ ಹೇಳಿಕೆಯನ್ನು ಹಾಗೂ ಮುಖ್ಯ ವಿಚಾರಣೆಯನ್ನು ಪರಿಶೀಲನೆ ಮಾಡಿ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪರವಾನಿಗೆ ಕೊಡಲಾಯಿತು).

<u>ಪಾಟೀಸವಾಲು ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:</u>

( ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಇರುವ ಬಿಳಿ ಬಟ್ಟೆಯಲ್ಲಿ ಹೊಲೆದು ಸೀಲ್ ಮಾಡಲಾಗಿರುವ ವಸ್ತುಗಳನ್ನು ತೆರೆಯಲು ಮಾನ್ಯ ಸಾರ್ವಜನಿಕ ಅಭಿಯೋಜಕರು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು ).

ಪಾಟೀಸವಾಲು ಆರೋಪಿತರ ಪರವಾಗಿ ಶ್ರೀ ವಕೀಲರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.